**ಗಾಸ್ಪೆಲ್ ನ ಸಂದೇಶ** - *ದಯವಿಟ್ಟು ಕೆಳಗಿನವುಗಳನ್ನು ಓದಿರಿ:*

*ಜೆನ್ 1:1* *ಮೊದಲಿಗೆ ದೇವರು ಸ್ವರ್ಗ ಹಾಗು ಭೂಮಿಯನ್ನು ಸೃಷ್ಟಿಸಿದನು.*

ರೋಮ್ 3:23 *ಎಲ್ಲಾರು ಪಾಪವ ಮಾಡಿದವರು ಹಾಗು ದೇವರ ವೈಭವತೆಯಿಂದ ಕೆಳಗುರುಳಿದವರರಾಗಿರುವರು.*

ಜಾನ್ 8:34 *ಏಸುಕ್ರಿಸ್ತ ಅವರಿಗೆ ಹಿಗೆ ಉತ್ತರಿಸಿದ, "ಖಚಿತವಾಗಿ ನಾನು ನಿಮಗೆ ಹೇಳುವುದೇನೆಂದರೆ,ಯಾರು ಪಾಪವನ್ನು ಮಾಡುತ್ತಾರೋ ಅವರೆಲ್ಲಾರು ಪಾಪದ ಗುಲಾಮರು.*

ದೇವರು ನಮ್ಮನ್ನು ಸೃಷ್ಟಿಸಿದ ಆದರೆ ನಮಗವನ ಬಗ್ಗೆ ತಿಳಿದಿಲ್ಲಾ ಹಾಗು ನಮ್ಮ ಪಾಪಪೂರಕ ಸ್ವರೂಪದಿಂದಾಗಿ ನಾವು ಅವನಿಂದ ಬೇರೆಯಾಗಿರುವೆವು.ದೇವರಿಗೆ ಯಾವುದೇ ಅರ್ಥ ಹಾಗು ಯಾವುದೇ ಧ್ಯೇಯವಿಲ್ಲಾ.ನಮ್ಮ ಪಾಪಗಳಿಗೆ ಫಲ (ತೆರಬೇಕಾದ ಬೆಲೆ) ಆಧ್ಯಾತ್ಮಿಕ ಹಾಗು ದೈಹಿಕ ಸಾವು.ಆಧ್ಯಾತ್ಮಿಕ ಸಾವೆಂದರೆ ದೇವರಿಂದ ಬೇರೆಯಾಗುವುದು ಎಂದರ್ಥ,ದೈಹಿಕ ಸಾವೆಂದರೆ ಈ ದೇಹದ ಕೊಳೆಯುವಿಕೆಯೇ ಆಗಿದೆ.ನಾವು ನಮ್ಮ ಪಾಪದಿಂದಾಗಿ ಸಾವನ್ನಪ್ಪಿದರೆ ದೇವರಿಂದ ಬೇರೆಯಾಗಿ ನರಕದಲ್ಲಿ ಅಂತ್ಯವನ್ನು ಕಾಣುತ್ತೇವೆ. ಹೇಗೆ ನಾವು ನಮ್ಮನ್ನು ನಮ್ಮದೇ ಆದ ಪಾಪಗಳಿಂದ ರಕ್ಷಿಸಿಕೊಂಡು ದೇವರ ಬಳಿಗೆ ಹಿಂದಿರುಗಬಹುದು? ನಾವು ನಮ್ಮನ್ನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲಾ ಕಾರಣ (ಮುಳುಗುತ್ತಿರುವ ವ್ಯಕ್ತಿಗೆ ಹೇಗೆ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲದಿರುವಂತೆ) ಪಾಪಿ ವ್ಯಕ್ತಿಗೆ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲಾ. ಬೇರೆಯವರೂ ಕೂಡ ನಮ್ಮನ್ನು ರಕ್ಷಿಸಲು ಸಾಧ್ಯವಿಲ್ಲಾ ಏಕೆಂದರೆ ನಾವೆಲ್ಲಾರೂ ಕೂಡ ಪಾಪಿಗಳು (ಒಬ್ಬ ಮುಳುಗುತ್ತಿರುವ ವ್ಯಕ್ತಿ ಮತ್ತೊಬ್ಬ ಮುಳುಗುತ್ತಿರುವವನನ್ನು ರಕ್ಷಿಸಲು ಸಾಧ್ಯವಿಲ್ಲಾ, ಅವರಿಬ್ಬರಿಗು ನೆರವಿನ ಅಗತ್ಯತೆ ಇದೆ) ನಮಗೆ ನಮ್ಮ ಪಾಪಗಳಿಂದ  ಕಾಪಾಡಲು ಈ ಪಾಪಗಳಿಂದೆಲ್ಲಾ ವಿಮುಕ್ತನಾಗಿರುವವನ(ಮುಳುಗದಿರುವವನ) ಅಗತ್ಯವಿದೆ.ಕೇವಲ ಪಾಪಮುಕ್ತನಾದವನು ಮಾತ್ರ ನಮ್ಮನ್ನು ರಕ್ಷಿಸಲು ಸಾಧ್ಯ.ಎಲ್ಲೆಡೆಯು ಪಾಪವಿರುವ ಈ ಪಾಪಿಗಳಲೋಕದಲ್ಲಿ ಪಾಪ ಮುಕ್ತನಾದವನನ್ನು ಹುಡುಕುವುದು ಹೇಗೆ?

*ರೋಮ್ 6:23* *ಪಾಪದ ಕೂಲಿ ಸಾವು ಆದರೆ ದೇವರು ನಮಗೆ ನೀಡಿದ್ದು ಏಸು ಕ್ರಿಸ್ತ ದೈವವೆಂಬುವುದರಲ್ಲಿನ ಅನಂತತೆಯ ಜೀವನ.*

*ಜಾನ್ 3:16* *ದೇವರು ಈ ಜಗತ್ತನ್ನು ತುಂಬಾನೇ ಪ್ರೀತಿಸುತ್ತಾನೆ ಆದುದರಿಂದಲೆ ಆತ ನಮಗೆ ತನ್ನ ಏಕಮಾತ್ರ ಪ್ರಿಯಪುತ್ರನನ್ನು ಕರುಣಿಸಿದನು, ಯಾರು ಅವನಲ್ಲಿ ನಂಬಿಕೆಯನ್ನಿರಿಸುವರೋ ಅವರಿಗೆ ನಾಶವೆಂಬುವುದಿಲ್ಲಾ ಬದಲಿಗೆ ಅನಂತತೆಯ ಜೀವನ ದೊರೆಯುವುದು.*

*ಮಾಥ್ 1:23* *"ಗಮನಿಸಿ, ಕನ್ಯೆಯೊಬ್ಬಳು ಶಿಶುವನ್ನು ಹೊಂದಿರುವಳು, ಅದು ಗಂಡು ಶಿಶು,ಅವರೆಲ್ಲಾ ಅವನನ್ನು ಇಮ್ಯಾನುಯೆಲ್" ಎಂದು ಕರೆವರು ಅದರ ಅನುವಾದ ದೈವ ನಮ್ಮೊಂದಿಗಿಹುದು" ಎಂದಾಗಿದೆ.*

Copyright © www.gospel.net

*ಜಾನ್ 8:23* *ಆಗ ಅವನು ಅವರಿಗೆ ಹೀಗೆಂದನು "ನೀನು ಕೆಳಗಿನಿಂದಾದವನು ನಾನು ಮೇಲಿನಿಂದ ಬಂದವನು ನೀನು ಈ ಜಗತ್ತಿನಿಂದಾವನು ಆದರೆ ನಾನು ಈ ಜಗತ್ತಿನಿಂದಾದವನಲ್ಲಾ."*

*ಮಾರ್ಕ್ 1:11* *ಆಗ ಸ್ವರ್ಗದಿಂದ ಒಂದು ವಾಣಿ ಕೇಳಿ ಬಂದು ಹೀಗೆನ್ನುವುದು, "ಯಾರಲ್ಲಿ ನಾನು ಪೂರ್ಣವಾಗಿ ಸಂತುಷ್ಟನಾಗಿರುವೆನೂ ಆ ನನ್ನ ಪ್ರಿಯಪುತ್ರನೇ ನೀನು."*

*ಜಾನ್ 8:36* *ಆದುದರಿಂದ ದೈವಪುತ್ರನು ನಿನ್ನನ್ನು ಬಧನ ಮುಕ್ತನಾಗಿ ಮಾಡಿದರೆ ಖಂಡಿತವಾಗಲೂ ನೀನು ಮುಕ್ತನಾಗುವೆ.*

*ಜಾನ್ 3:3* *ಏಸು ಕ್ರಿಸ್ತ ಆತನಿಗೆ ಉತ್ತರಿಸುತ್ತ ಹೀಗೆ ಹೇಳಿದನು, "ಖಚಿತವಾಗಿ ನಾನು ನಿನಗೆ ಹೇಳುವುದೇನೆಂದರೆ, ಯಾರೊಬ್ಬನು ಮರುಹುಟ್ಟನ್ನು ಪಡೆಯದ ಹೊರತು, ದೇವರ ರಾಜ್ಯವನನ್ನುನೋಡಲು ಸಾಧ್ಯವಿಲ್ಲಾ."*

*ಜಾನ್ 1:12* *ಆದರೆ ಹಲವಾರು ಜನರು ಅವನನ್ನು ಸ್ವೀಕರಿಸಿದರು,ಅವರಿಗೆ ಹಾಗು ಯಾರು ಆತನ ಹೆಸರಿನಲ್ಲಿ ನಂಬಿಕೆಯನ್ನಿರಿಸಿದರೋ ಅವರಿಗೆಲ್ಲಾ ಆತನು ದೇವರ ಮಕ್ಕಳಾಗುವ ಹಕ್ಕನ್ನು ನೀಡಿದನು:*

ದೇವರು,ಯಾರು ನಮ್ಮನ್ನು ಸೃಷ್ಟಿಸಿರುವನೋ ಹಾಗು ನಮ್ಮನ್ನು ತೀವ್ರವಾಗಿ ಪ್ರೀತಿಸುವನೋ ಆತನೇ ನಮಗೆ ಪರಿಹಾರವನ್ನು ಕೂಡ ನೀಡಿರುವನು.ನಮ್ಮ ಮೇಲಿನ ಅವನ ಅಗಾಧವಾದಂತಹ ಪ್ರೀತಿಯಿಂದಾಗಿಯೇ ಆತ ತನ್ನ ಮಗನಾದ ಏಸುವನನ್ನು ನಮ್ಮ ಪಾಪಗಳಿಗಾಗಿ ಪ್ರಾಣತ್ಯಾಗ ಮಾಡಲು ಕಳುಹಿಸಿದನು.ಏಸು ಪಾಪಮುಕ್ತ ಏಕೆಂದರೆ ಆತ ಈ ಪ್ರಪಂಚದಿಂದಾವನಲ್ಲ, ಹಾಗು ದೇವರ ಪ್ರೇರಣೆಯಿಂದ ಆತ ಈ ಭೂಮಿಗೆ ಬಂದನು ಹಾಗು ಪಾಪ ಗೈಯಲು ಪ್ರಚೋದಿಸಿದ ಸೈತಾನನ ಜಾಲದಿಂದ ಗೆದ್ದು ಬಂದವನು.ಅವನ ಜೀವನ ಸ್ವರ್ಗದಲ್ಲಿನ ದೇವರನ್ನು ಮೆಚ್ಚುಗೆಗೊಳಿಸಿತು.ಏಸು ನಮ್ಮ ಪಾಪಗಳನ್ನು ತಾನು ಹೊತ್ತು ಶಿಲುಬೆಯ ಮೇಲೆ ನಮ್ಮ ಪಾಪಗಳಿಗಾಗಿ ತನ್ನ ಜೀವವ ನೀಡಿದನು.ಅವನು ನಮ್ಮ ಜೀವನದ ರಕ್ಷಕ (ಏಸು ನಮ್ಮನ್ನು ಕಾಪಾಡಲು ಸಾಧ್ಯ ಏಕೆಂದರೆ ಅವನು ಮುಳುಗುತ್ತಿರಲಿಲ್ಲಾ). ಏಸು ಶಿಲುಬೆಯ ಮೇಲೆ ಪ್ರಾಣ ತ್ಯಾಗ ಮಾಡಿದ ಉದ್ಧೇಶ ನಮ್ಮ ಪಾಪಗಳಿಗೆ ತೆತ್ತ ದಂಡವಾಗಿದೆ ಹಾಗು,ನಮ್ಮ ಪಾಗಳನ್ನು ನೀಗಿ ದೇವರೊಂದಿಗಿನ ನಮ್ಮ ಸಂಬಂಧವನ್ನು ಪುನರ್ ರೂಪಿಸುವುದಾಗಿದೆ. ದೇವರ ಶಕ್ತಿಯಿಂದಾಗಿಯೆ ನಾವು ನಮ್ಮ ಆಧ್ಯಾತ್ಮಿಕ ಸಾವಿನಿಂದ ( ದೇವರಿಂದ ಬೇರೆಯಾದುದರಿಂದ) ಬದುಕಿ ಬಂದಿರುವೆವು.ಈ ಹೊಸ ಸಂಬಂಧವನ್ನೇ ಪುನರ್ ಹುಟ್ಟು ಎಂದು ಕರೆಯಲಾಗುವುದು.ಇದು, ನಮ್ಮ ಸೃಷ್ಟಿ ಹಾಗು ಅಸ್ತಿತ್ವದ ಉದ್ಧೇಶವನ್ನು ಪುನರ್ ರೂಪಿಸುವುದು ಹಾಗು,ನಮ್ಮ ಜೀವಿತದ ನಿಜವಾದ ಅರ್ಥವನ್ನು ನೀಡುವುದು.

*ಜಾನ್ 11:25* *ಏಸುಕ್ರಿಸ್ತ ಅವಳಿಗೆ ಹೀಗಂದನು "ನಾನೇ ಮರುಹುಟ್ಟು ಹಾಗು ಜೀವನ. ಯಾರು ನನ್ನಲ್ಲಿ ನಂಬಿಕೆಯನ್ನಿರಿಸುವರೋ ಅವನು ಸತ್ತರೂ ಕೂಡ ಜೀವಂತವಾಗುಳಿಯುವನು.*

Copyright © www.gospel.net

| | |
|---|---|
| *ರೋಮ್ 6:9* | *ಕ್ರಿಸ್ತ ಸಾವಿನಿಂದ ಎದ್ದು ಬಂದವನು, ಮತ್ತೆಂದಿಗೂ ಅವನಿಗೆ ಸಾವಿಲ್ಲ ಎಂಬುವುದನ್ನು ತಿಳಿದಿರುವುದು.ಸಾವೆಂದಿಗೂ ಅವನ ಮೇಲೆ ಜಯಿಸಲು ಸಾಧ್ಯವಿಲ್ಲಾ.* |
| *ಆಕ್ಟ್ 2:24* | *ದೇವರು ಯಾರನ್ನು ಸಾವಿನಿಂದ ಮೇಲೆತ್ತಿದನೋ, ಸಾವಿನ ನೋವನ್ನು ಇಳಿಸಿದನು. ಏಕೆಂದರೆ ಏಸುವಿನ ಈ ರಿತಿಯ ಅಂತ್ಯ ತರನಾದುದಲ್ಲಾt.* |
| *ರೋಮ್ 14:9* | *ಈ ಮುಕ್ತಾಯಕ್ಕೆ ಕ್ರಿಸ್ತ ಸತ್ತು ಮತ್ತೆ ಹುಟ್ಟಿ ಬದುಕಿದ,ಅದರಿಂದ ಆತ ಸತ್ತಿರುವವರ ಹಾಗು ಬದುಕಿರುವವರ ಇಬ್ಬ ರ ದೈವವಾಗಿದ್ದಾನೆ.* |
| *ಆಕ್ಟ್ 1:11* | *ಆತ "ಗಲಿಲಿಯ ವ್ಯಕ್ತಿಗೆ ಈಗೂ ಹೇಳಿದ ನೀನು ಸ್ವರ್ಗದೆಡೆಗೆ ಹೀಗೇಕೆ ನೋಡುತ್ತಿರುವೆ? ಇಂದು ನಿನ್ನಿಂದ ಸ್ವರ್ಗಕ್ಕೆ  ನಾನು ತೆಗೆದೊಯ್ಯುತ್ತಿರು ಈ ಏಸು ಕ್ರಿಸ್ತನು ನೀನು ನೋಡುತ್ತಿರು ಇದೆ ರೀತಿಯಲ್ಲಿ ಮತ್ತೆ ಈ ಭೂಮಿಗೆ ಬರುವನು."* |

ನಮ್ಮ ಪಾಪಗಳಿಗಾಗಿ ಏಸು ಪ್ರಾಣ ತ್ಯಾಗ ಮಾಡಿರುವುದನ್ನು ಸ್ವರ್ಗದಲ್ಲಿನ ದೇವರಿಂದ ಸ್ವೀಕರಿಸಲ್ಪಟ್ಟಿದೆ ಎಂಬುವುದಕ್ಕೆ ಆಧಾರವೇನಿದೆ? ಇದಕ್ಕಿರುವ ಆಧಾರ ದೇವರಿಂದಾಗಿ ಸಾವಿನಿಂದ ಏಸುವಿನ ಮರು ಹುಟ್ಟು ಆಗಿರುವುದೇ ಆಗಿದೆ. ಮರು ಹುಟ್ಟಿನಿಂದಾಗಿ ಏಸು ಸಾವನ್ನು ಜಯಿಸಿ ಬಂದಿರುವುದು ಸಾಬೀತಾಗುವುದು (ಅಥವ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಾವಿಗೆ ಅವನನ್ನು ಜಯಿಸುವ ಶಕ್ತಿಯಿಲ್ಲಾ).ಈಗ ಅದರಿಂದಾಗಿ ಏಸು ಬದುಕಿದುದರಿಂದಾಗಿ ನಾವು ಕೂಡ ಬದುಕಿರುವೆವು.ನಮ್ಮಲಿನ ಅವನ ಜೀವ ನಮಗೆ ಜೀವನವ ನೀಡಿದೆ.ಅದರೊಂದಿಗೆ ಮರು ಹುಟ್ಟು ಪಡೆದಿರುವುದರಿಂದಲೇ  ಅವನಿಂದೂ ಜೀವಂತವಾಗಿರುವುದು.

| | |
|---|---|
| *ಜಾನ್ 5:24* | *"ಖಚಿತವಾಗಿ ನಾನು ಹೇಳುವುದೇನೆಂದರೆ ನನ್ನ ಮಾತನ್ನು ಯಾರು ಕೇಳುವರೋ ಹಾಗು ನನ್ನನು ಕಳುಹಿಸಿದಾತನನ್ನು ಯಾರು ನಂಬುವರೋ ಅವರಿಗೆ ಅನಂತ ಜೀವನ ದೊರಕುವುದು, ಹಾಗು ಅವರು ಯಾವುದೇ ನ್ಯಾಯ ತೀರ್ಮಾನಕ್ಕೆ ಒಳಪಡದೆ ನೇರವಾಗಿ ಸಾವಿನಿಂದ ಜೀವನದಕ್ಕೆ ತೇರ್ಗಡೆ ಹೊಂದುವರು.* |
| *ಜಾನ್ 10:9* | *ನಾನೊಂದು ದ್ವಾರವಿದ್ದಂತೆ ಯಾರಾದರು ನನ್ನ ಮೂಲಕ ಒಳ ಪ್ರವೇಶಿಸಿದರೆ ಅವರು ರಕ್ಷಿಸಲ್ಪಡುವರು ಹಾಗು ಸುಗಮವಾಗಿ ಒಳಗೆ ಹಾಗು ಹೊರಗೆ ಹೋಗುವರು ಮತ್ತು ಸರಿಯಾದ ನಿಲುವನ್ನು ಪಡೆದುಕೊಳ್ಳುವರು.* |
| *ಜಾನ್ 14:6* | *ಅವನಿಗೆ ಏಸುಕ್ರಿಸ್ತ ಹೀಗಂದನು, ನಾನೇ ದಾರಿ, ಸತ್ಯ ಹಾಗು ಜೀವನ.ನನ್ನ ಹೊರತಾಗಿ ಪಿತನ ಬಳಿಗೆ ಯಾರು ಬರಲಾಗದು.* |
| *ಜಾನ್ 8:24* | *ಆದುದರಿಂದಲೆ ನಾನು ಹೇಳಿದ್ದು ನೀನು ನಿನ್ನ ಪಾಪಗಳಿಂದಾಗಿ ಸಾಯುವೆ ಎಂದು.ಅವನು ನಾನೇ ಎಂದು ನೀನು ನಂಬದಿದ್ದರೆ ನೀನು ನಿನ್ನ ಪಾಪಗಳಿಂದಾಗಿಯೇ ಸಾಯುವೆ."* |
| *ಆಕ್ಟ್ 4:12* | *ಬೇರೆ ಯಾರಲ್ಲಿಯು ಮೋಕ್ಷ ದೊರಕದು,ಮಾನವರಲ್ಲಿ ಬೇರೆ ಯಾರ ಹೆಸರು  ಕೂಡ ನಮ್ಮನ್ನು ರಕ್ಷಿಸಲು ಮೋಕ್ಷವ ನೀಡಲು  ಸ್ವರ್ಗದಲ್ಲಿ ಉಲ್ಲೇಖಿತವಾಗಿಲ್ಲ ."* |

*ರೋಮ್ 10:13* *“ಯಾರು ಪರಮಾತ್ಮನ ಹೆಸರನ್ನು ಕೂಗುವರೋ ಅವರೆಲ್ಲಾ ರಕ್ಷಿಸಲ್ಪಡುವರು.”*

*ರೋಮ್ 10:11* *ಶಿಲ್ಪಕಲೆಗಳು ಸಾರಿ ಹೇಳುತ್ತವೆ , “ಯಾರು ಅವನಲ್ಲಿ ನಂಬಿಕೆಯನ್ನಿರಿಸುವರೋ ಅವರೆಂದಿಗೂ ನಾಚಿಕೆಗೀಡಾಗುವ ಸಂಭವ ಬರುವುದಿಲ್ಲ.”*

*ರೋಮ್ 2:11* *ದೇವರಲ್ಲಿ ತಾರತಮ್ಯವಿಲ್ಲಾ.*

*ರೋಮ್ 3:22* *ದೇವರ ನ್ಯಾಯಸಮ್ಮತತೆ, ಏಸುವಿನ ಮೇಲೆ ನಂಬಿಕೆಯನ್ನಿರಿಸುವ ಮೂಲಕ ಎಲ್ಲಾರಿಗೆ ಹಾಗು ಎಲ್ಲರ ಮೇಲೆ ಇದೆ.ಇದರಲ್ಲಿ ಯಾವುದೇ ಭಿನ್ನತೆ ಇಲ್ಲಾ.*

*ರೋಮ್ 10:9* *ನೀವು ನಿಮ್ಮ ಬಾಯಾರೆ ಏಸು ಕ್ರಿಸ್ತನಲ್ಲಿ ತಪ್ಪೊಪ್ಪಿಗೆ ಗೈದು ನಿಮ್ಮ ಮನಸ್ಸಿನಲ್ಲಿ ಏಸುವನ್ನು ದೈವವು ಸಾವಿನಿಂದ ಮೇಲಕ್ಕೆ ಎತ್ತಿಹುದಂಬುವುದನ್ನು ನಂಬಿದರೆ ನೀವು ರಕ್ಷಿತರಾದಂತೆ.*

ಹೇಗೆ ನಮ್ಮ ಪಾಪಗಳನೆಲ್ಲಾ ನಿವಾರಿಸುವುದು ಹಾಗು ಹೊಸ ಜೀವನವ ಪಡೆಯುವುದು? ಏಸುವನ್ನು ನಮ್ಮ ದೈವ ಹಾಗು ರಕ್ಷಕ ಎಂದು ನಂಬುವುದರಿಂದ ಮಾತ್ರ ಸಾದ್ಯ.ನಾವು ನಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡುವುದರೊಂದಿಗೆ ಏಸುವಿನಲ್ಲಿ ನಮ್ಮನ್ನು ಕ್ಷಮಿಸುವಂತೆ ಹಾಗು ರಕ್ಷಿಸುವಂತೆ ಮೊರೆಯನ್ನಿಟ್ಟರೆ ಆತ ಖಂಡಿತವಾಗಲು ಅದನ್ನು ನೆರವೇರಿಸುವನು.ಏಸು ನಮ್ಮ ಪಾಪಗಳಿಗಾಗಿ ಪ್ರಾಣತ್ಯಾಗ ಮಾಡಲು ಈ ಪ್ರಪಂಚಕ್ಕೆ ಬಂದ ದೇವರ ಮಗ.ಈ ಭೂಮಿಯ ಮೇಲಿರುವ ಯಾರೇ ಆಗಲಿ ಅವನ ಮೇಲೆ ನಂಬಿಕೆಯನ್ನಿರಿಸಿದರೆ ಅವರು ಖಂಡಿತವಾಗಲು ದೇವರಿಂದ ಕ್ಷಮೆಯನ್ನು ಪಡೆಯವರು,ತಮ್ಮ ಪಾಪಗಳಿಂದ (ಹಾಗು ನರಕದಿಂದ)ರಕ್ಷಿಸಲ್ಪಡುವರು ಹಾಗು ದೇವರಿಂದ ಹೊಸ ಜೀವನವನ್ನು ಪಡೆಯವರು.ದೇವರು ತಾರತಮ್ಯ ತೋರುವುದಿಲ್ಲಾ. ಅವನು,ನಾವಿರುವ ದೇಶದಿಂದ,ನಾವಾಡುವ ಭಾಷೆಯಿಂದ,ಬಡವ ಹಾಗು ಶ್ರೀಮಂತ, ಹೆಣ್ಣು ಹಾಗು ಗಂಡು, ಯುವಕ ಹಾಗು ವೃದ್ಧ, ಅಥವ ಬೇರಾವುದೇ ದೈಹಿಕ ವಿಭಿನ್ನತೆಗಲಿಂದ ಪ್ರಭಾವಿತನಾದವನ್ನಲ್ಲಾ. ಏಸುವನ್ನು ನಂಬಿದವರು ಹಾಗು ತಪ್ಪೊಪ್ಪಿಕೊಂಡಿರುವವರೆಲ್ಲಾರೂ ರಕ್ಷಿಸಲ್ಪಡುವರು.ಏಸುವನ್ನು ಅನುಸರಿಸವುದಾಗಿ ನೀವು ನಿರ್ಧರಿಸಿದ್ದರೆ ಈ ಕೆಳಗಿನ ಪಾರ್ಥನೆಯನ್ನು ನೀವು ಪಠಿಸಬಹುದು:

*ಸ್ವರ್ಗದಲ್ಲಿರುವ ದೇವನೇ, ನನ್ನ ಪಾಪಗಳಿಗಾಗಿ ಪ್ರಾಣ ನೀಡಲು ಅದರಿಂದ ನಾನು ರಕ್ಷಿತನಾಗಿ ಹೊಸ ಜೀವನವನ್ನು ಪಡೆಯಲಿಕೋಸ್ಕರ ನಿನ್ನ ಏಕ ಮಾತ್ರ ಮಗನಾದ ಏಸುವನ್ನು ಕಳುಹಿಸಿದುದಕ್ಕೆ ನಿನಗೆ ನನ್ನ ವಂದನೆಗಳು.ನಾನು ನನ್ನ ಪಾಪಗದಾರಿಗಳಿಗಾಗಿ ಪಶ್ಚತ್ತಾಪ ಪಡುತ್ತಿರುವೆ ಹಾಗು ನಿನ್ನಲ್ಲಿ ಕ್ಷಮೆಯನ್ನು ಯಾಚಿಸುತ್ತಿರುವೆನು.ನಾನು ಏಸುವನ್ನು ನಂಬಿ ಆತನನ್ನು ನನ್ನ ದೈವ ಹಾಗು ರಕ್ಷಕನೆಂದು ಸ್ವೀಕರಿಸಿರುವೆನು.ನೀನು ನೀಡಿರುವ ಈ ಹೊಸ ಜೀವನದಲ್ಲಿ ನಿನ್ನನ್ನು ಒಲಿಸಿಕೊಳ್ಳುವ ನಿಟ್ಟಿನಲ್ಲಿ ನನಗೆ ಸಹಾಯ ಮಾಡು ಹಾಗು ಮಾರ್ಗದರ್ಶನ ನೀಡು. ಆಮೇನ್*

ನೀನು ಈ ಮೇಲಿನ ಪ್ರಾರ್ಥನೆಯನ್ನು ಮಾಡಿದಲ್ಲಿ, ದೇವರಲ್ಲಿ ನೀನು ಹೋಗ ಬೇಕಾದ ಚರ್ಚನ್ನು ತೋರಿಸುವಂತೆ ಕೇಳಿಕೊ.ದೇವರೊಂದಿಗೆ ಪ್ರಾರ್ಥನೆಯ ಮೂಲಕ ನಿತ್ಯವು ಮಾತನಾಡು ಹಾಗು ದೈವವು ನಿನ್ನೊಂದಿಗೆ

ಮಾತನಾಡುವುದು. ದೈವವಾಣಿಗೆ ಓಗೊಡು.ದೇವರು ನಿನಗೆ ದಾರಿ ತೋರುವ.ಅವನು ನಿನ್ನ ಪ್ರೀತಿಸುವ ಹಾಗು ನಿನ್ನ ಬಗ್ಗೆ ಕಾಳಜಿ ತೋರುವನು. ನೀನು ಅವನಲ್ಲಿ ನಂಬಿಕೆಯನ್ನರಿಸಬಹುದು.ಅವನಲ್ಲಿ ನಂಬಿಕೆಯಿರಿಸಿದವರು ಸೋಲುವುದಿಲ್ಲಾ. ದೇವರು ಒಳ್ಳೆಯ ದೇವರು. ಅವನನ್ನು ನಂಬಬಹುದು. ನಿನ್ನ ಜೀವನಕ್ಕಾಗಿ ನೀನು ಅವನನ್ನು ಅವಲಂಬಿಸಬಹದು.ನಿನ್ನ ಬೇಡಿಕೆಗಳನ್ನು ಅವನ ಮುಂದಿರಿಸು. ಅವನು ನಿನ್ನ ಬಗೆ ಕಾಳಜಿ ತೋರಿ ನಿನ್ನನ್ನು ಆಶೀರ್ವದಿಸುವ.ದೇವನು ಹೀಗೆ ಹೇಳಿರುವನು, ‘ನಾನೆಂದಿಗೂ ನಿನ್ನನ್ನು ಕೈಬಿಡುವುದಿಲ್ಲಾ ಹಾಗು ಪರಿತ್ಯೆಜಿಸುವುದಿಲ್ಲಾ’.ದೇವರಲ್ಲಿ ನಂಬಿಕೆಯನ್ನಿಡು. ಏಸುವಿನ ಮುಖೇನ ಆಶೀರ್ವದಿಸಲ್ಪಡುವೆ.

ಜಾನ್ ನ ಪುಸ್ತಕದಿಂದ ಆರಂಭಿಸಿ, ಬೈಬಲನ್ನು ದಿನನಿತ್ಯ ಓದಿರಿ.ಹೆಚ್ಚಿನ ಅಂತರ್ ಜಾಲ ಸಂಪನ್ಮೂಲಗಳಿಗಾಗಿ, ಇಲ್ಲಿ ಕ್ಲಿಕ್ ಮಾಡಿ.